ಪ್ರಕ್ರಿಯೆ ಸದನದ ಘನತೆಗೆ ಕುಂದು ತಂದಿದೆ ಎನ್ನುವ ಆರೋಪಕ್ಕೆ ಉತ್ತರವಾಗಿ ಚೆಟ್ಟಿ ರಾಜೀನಾಮೆ ಕೊಟ್ಟರು. ನೆಹರೂ ಅದನ್ನು ಒಪ್ಪಿದರು. ಇಲ್ಲಿ ಇದ್ದದ್ದು ವ್ಯಾಪಾರ ಜಗತ್ತಿಗೂ ಸರ್ಕಾರಕ್ಕೂ ಇರಬಹುದಾದ ಸೌಹಾರ್ದದ ಪ್ರಶ್ನೆ. ವ್ಯಾಪಾರಕ್ಕೆ ತಕ್ಕ ವಾತಾವರಣವನ್ನು ಉಂಟು ಮಾಡಬೇಕಾದ್ದು ಸರ್ಕಾರದ ಕರ್ತವ್ಯವೆಂದು ಪಟೇಲ್ ವಾದಿಸಿದ್ದರು.

ನಂತರದ ವಿತ್ತಮಂತ್ರಿಗಳಾದವರು ಜಾನ್ ಮಥಾಯ್. ಅವರು ಅಧಿಕಾರವನ್ನು ತ್ಯಜಿಸಿದ ಕಥೆ ಗಮ್ಮತ್ತಿನದ್ದು. ಇದು ಯೋಜನಾ ಆಯೋಗದ ಸ್ಥಾಪನೆಗೆ ಸಂಬಂಧಿಸಿದ್ದು. ಯೋಜನಾ ಆಯೋಗದ ಸ್ಥಾಪನೆಯನ್ನು ಮಥಾಯ್ ಸಮರ್ಥಿಸಿದ್ದರಾದರೂ, ಅದರ ಕಾರ್ಯಕ್ಷೇತ್ರ ಕೇವಲ ಯೋಜನೆಗಳನ್ನು ರೂಪಿಸುವುದಕ್ಕೆ, ಮತ್ತು ಸರ್ಕಾರಕ್ಕೆ ಕಾರ್ಯಕ್ರಮಗಳನ್ನು ಸೂಚಿಸುವುದಕ್ಕೆ ಪರಿಮಿತವಾಗಬೇಕೆಂದು ನಂಬಿದ್ದರು. ಆದರೆ ನೆಹರೂ ಅದನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಮನ್ವಯಕ್ಕೆ ಉಪಯೋಗಿಸಬೇಕೆಂದು ಬಯಸಿದ್ದರು. ಯೋಜನಾ ಆಯೋಗವನ್ನು ಸ್ಥಾಪಿಸಲು ಯಾವುದೇ ಕಾನೂನಿನ ಚೌಕಟ್ಟನ್ನು ಹಾಕದೇ, ಕೇವಲ ಒಂದು ಸುತ್ತೋಲೆಯ ಮೂಲಕ ಆದೇಶ ನೀಡಿ ಸ್ಥಾಪಿಸಲಾಯಿತು. ಇದರ ಬಗ್ಗೆ ಭಿನ್ನಾಭಿಪ್ರಾಯ ವ್ಯಕ್ತಪಡಿಸುತ್ತಾ ಮಥಾಯ್ ರಾಜೀನಾಮೆ ಕೊಟ್ಟರು. 2014ರಲ್ಲಿ ಮೋದಿ ಪ್ರಧಾನಮಂತ್ರಿಯಾದಾಗ ಇದೇ ರೀತಿಯ ಆದೇಶ ಕೊಟ್ಟು ಯೋಜನಾ ಆಯೋಗವನ್ನು ರದ್ದು ಮಾಡಿ, ಅದರ ಜಾಗದಲ್ಲಿ ನೀತಿ ಆಯೋಗವನ್ನು ಸ್ಥಾಪಿಸಿದರು. ಈಗ ನೀತಿ ಆಯೋಗದ ಜವಾಬ್ದಾರಿ ಮತ್ತು ಕಾರ್ಯಕಲಾಪಗಳನ್ನು ನೋಡಿದರೆ, ಅದು ಮಥಾಯ್ ಸೂಚಿಸಿದ ದಾರಿಯಲ್ಲಿ ಸಾಗುತ್ತಿರುವಂತೆ ಕಾಣುತ್ತದೆ.

ಮಥಾಯ್ ನಂತರ ಬಂದವರು ಸಿ.ಡಿ. ದೇಶಮುಖ್. ದೇಶಮುಖ್ ಹಿಂದೆ ರಿಜರ್ವ್ ಬ್ಯಾಂಕಿನ ಗವರ್ನರಾಗಿ ಕೆಲಸಮಾಡಿದ್ದರು. ಅದಕ್ಕೂ ಮೊದಲು ಐ.ಸಿ.ಎಸ್. ಅಧಿಕಾರಿಯಾಗಿ ಕೆಲಸಮಾಡಿ ನಿವೃತ್ತರಾದವರು. ದೇಶಮುಖರ ಸೇವೆಗಳನ್ನು ಅಧಿಕಾರದ ಹಸ್ತಾಂತರ ಪೂರ್ವ ತಾತ್ಕಾಲಿಕ ಸರ್ಕಾರದಲ್ಲಿ ಉಪಯೋಗಿಸಿಕೊಳ್ಳಬೇಕೆಂದು ವೇವೆಲ್ ಬಯಸಿದ್ದರು. ಆದರೆ ಕಾರಣಾಂತರಗಳಿಂದ ಅದು ಕೈಗೂಡಲಿಲ್ಲ. ಮಥಾಯ್ ರಾಜೀನಾಮೆ ಕೊಟ್ಟ ಕೂಡಲೇ ನೆಹರೂ ಅವರು ದೇಶಮುಖರನ್ನು ತಮ್ಮ ಮಂತ್ರಿಮಂಡಲಕ್ಕೆ ಸೇರಿಸಿಕೊಂಡರು. ಆರು ವರ್ಷಗಳ ಕಾಲ ವಿತ್ತಮಂತ್ರಿಗಳಾಗಿದ್ದ ದೇಶಮುಖ್ ಕಾಲದಲ್ಲಿ ಇಂಪೀರಿಯಲ್ ಬ್ಯಾಂಕಿನ ರಾಷ್ಟ್ರೀಕರಣವಾಗಿ ಸ್ಟೇಟ್ ಬ್ಯಾಂಕಾಗಿ ನಾಮಕರಣ ಹೊಂದಿತು. ಜೀವ ವಿಮಾ ಸಂಸ್ಥೆಯ ರಾಷ್ಟ್ರೀಕರಣವೂ ಆಯಿತು. ಅವರು ರಾಜೀನಾಮೆ ಕೊಡಲು ವಿಚಾರಧಾರೆ, ಸಿದ್ಧಾಂತ, ವ್ಯಾಪಾರ, ದಕ್ಷತೆ, ಹಗರಣ ಯಾವುದೇ ಕಾರಣವಾಗಲಿಲ್ಲ. ಬದಲಿಗೆ ಮಹಾರಾಷ್ಟ್ರ ಗುಜರಾತಿನ ನಡುವಿನ ಜಟಾಪಟಿಯಲ್ಲಿ ಮುಂಬಯಿಯನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಸ್ಥಾಪಿಸಬಹುದು ಎನ್ನುವ ನೆಹರೂ ಅವರ ರಾಜಕೀಯ ಪ್ರಸ್ತಾಪವನ್ನು ವಿರೋಧಿಸಿ ದೇಶಮುಖ್ ರಾಜೀನಾಮೆ ಕೊಟ್ಟರು. ಜೀವನಪರ್ಯಂತ ವೃತ್ತಿಪರವಾಗಿ ಬೆಳೆದುನಿಂತಿದ್ದ ದೇಶಮುಖ್ ಕಡೆಗೆ ಪ್ರಾಂತೀಯ ಮತ್ತು ರಾಜಕೀಯ ಕಾರಣಗಳಿಗೆ ತಮ್ಮ ಸ್ಥಾನವನ್ನು ಬಿಟ್ಟುಕೊಡಬೇಕಾಯಿತು.

ಟಿ.ಟಿ. ಕೃಷ್ಣಮಾಚಾರಿಯವರದ್ದು ಮತ್ತೊಂದೇ ಕಥೆ. ಅವರು ವ್ಯಾಪಾರಸ್ಥರ ಕುಟುಂಬದಿಂದ ಬಂದವರು. ಆದರೂ ಅವರು ಸಮಾಜವಾದಿ ನಿಲುವುಗಳನ್ನು ಹೊಂದಿದ್ದರು. ಅವರ ಕುಟುಂಬ ತಮ್ಮದೇ ಹೆಸರಿನ ವ್ಯಾಪಾರದಲ್ಲಿ ಮುಂದುವರೆದಿದ್ದರೂ ಕೃಷ್ಣಮಾಚಾರಿಗೆ ಅವರ ವ್ಯಾಪಾರದಲ್ಲಿ ಆಸಕ್ತಿಯಿರಲಿಲ್ಲ. ಆದರೆ ಅವರ ಕಾಲಕ್ಕೆ ಎರಡು ಪ್ರಮುಖ ಘಟನೆಗಳನ್ನು ಉಲ್ಲೇಖಿಸಬೇಕು. ಕೃಷ್ಣಮಾಚಾರಿಗೆ ರಿಜರ್ವ್ ಬ್ಯಾಂಕಿನ ಗವರ್ನರ್ ಆಗಿದ್ದ ಬೆನೆಗಲ್ ರಾಮರಾವ್ ಜೊತೆ ತೀವ್ರ ಭಿನ್ನಾಭಿಪ್ರಾಯಗಳಿದ್ದು, ಅದೇ ಕಾರಣವಾಗಿ ರಾಮರಾವ್ ರಾಜೀನಾಮೆ ಕೊಟ್ಟರು. ಇದು ರಿಜರ್ವ್ ಬ್ಯಾಂಕಿನ ಸ್ವಾಯತ್ತತೆಗೆ ಸವಾಲನ್ನು ಒಡ್ಡಿದರೂ ನೆಹರೂ ತಮ್ಮ ವ್ಯಾಮೋಹವನ್ನು ಕೃಷ್ಣಮಾಚಾರಿಯತ್ತ ತೋರಿದ್ದರು. ನಂತರ ದೇಶದ ದೊಡ್ಡ ಮುಂದ್ರಾ ಹಗರಣದಲ್ಲಿ ಕೃಷ್ಣಮಾಚಾರಿ ರಾಜೀನಾಮೆ ಕೊಡಬೇಕಾಯಿತು. ಅವರು ಭ್ರಷ್ಟಾಚಾರವನ್ನೆಸಗಿದ್ದಾರೆ ಎನ್ನುವುದಕ್ಕೆ ಯಾವುದೇ ಪುರಾವೆ ಸಿಗಲಿಲ್ಲವಾದರೂ, ಆ ಕಾಂಡದಲ್ಲಿ ಅವರ ಪಾತ್ರವಿದ್ದದ್ದು ಕಾಣುತ್ತಿತ್ತು.